# ಕುಂದಾಪುರ ತಾಲೂಕು ಪಂಚಾಯತ್ ರಾಜ್ ಒಕ್ಕೂಟ

C/o ನಮ್ಮ ಭೂಮಿ, ಹಟ್ಟಿಯಂಗಡಿ ಕ್ರಾಸ್ ಬಳಿ, ಕನ್ಯಾನ ಅಂಚೆ,
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
Email: panchayatrajkundapura@gmail.com

ಉಲ್ಲೇಖ ಸಂಖ್ಯೆ: ದಿನಾಂಕ: 20-02-2018,

**73ನೇ ಸಂವಿಧಾನ ತಿದ್ದುಪಡಿಯ 25ನೇ ವರ್ಷಾಚರಣೆಯ ಅಂಗವಾಗಿ**

**'ಗ್ರಾಮ ಸ್ವರಾಜ್ ಚಿಂತನ-ಮಂಥನ' ಕಾರ್ಯಕ್ರಮಕ್ಕೆ ಆಹ್ವಾನ**

ದೇಶದಾದ್ಯಂತ ತ್ರಿಸ್ಥರ ಪಂಚಾಯತ್ ರಾಜ್ ವ್ಯವಸ್ಥೆಗೆ ಸುಭದ್ರ ತಳಪಾಯವನ್ನು ಹಾಕಿಕೊಟ್ಟ ನಮ್ಮ ದೇಶದ 73ನೇ ಸಂವಿಧಾನ ತಿದ್ದುಪಡಿಗೆ ಈಗ ರಜತಮಹೋತ್ಸವದ ಸಂಭ್ರಮ. ಈ ಹಿನ್ನೆಲೆಯಲ್ಲಿ ಕುಂದಾಪುರ ತಾಲೂಕು ಪಂಚಾಯತ್ ರಾಜ್ ಒಕ್ಕೂಟ, ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ, ಉಡುಪಿ ಜಿಲ್ಲಾಡಳಿತ, ಉಡುಪಿ ಜಿಲ್ಲಾ ಪಂಚಾಯತ್, ಉಡುಪಿ ಜಿಲ್ಲೆಯ ಮೂರು ತಾಲೂಕು ಪಂಚಾಯತ್‌ಗಳು, ಉಡುಪಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್‌ಗಳ ಪಾಲುದಾರಿಕೆ ಹಾಗೂ ಸಮಾನ ಮನಸ್ಕ ಸಂಸ್ಥೆಗಳು ಜೊತೆಯಾಗಿ ಇದೇ ಬರುವ **ಫೆಬ್ರವರಿ 23 ಹಾಗೂ 24, 2018ರಂದು 'ಗ್ರಾಮ ಸ್ವರಾಜ್ ಚಿಂತನ-ಮಂಥನ'** ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ತಮ್ಮನ್ನು ಆದರದಿಂದ ಆಮಂತ್ರಿಸುತ್ತಿದ್ದೇವೆ.

ಗ್ರಾಮ ಸಭೆಯ ಪಾರಮ್ಯವನ್ನು ಎತ್ತಿಹಿಡಿದ ಈ 73ನೇ ಸಂವಿಧಾನ ತಿದ್ದುಪಡಿಯ 25ರ ಕಾಲಘಟ್ಟದಲ್ಲಿ, ಅದರ ಆಶಯಗಳು, ಒಳ-ಹೊರಗುಗಳು, ಈ ತಿದ್ದುಪಡಿಯನ್ನು ಇನ್ನೂ ಸಬಲಗೊಳಿಸಲು ಪೂರಕವಾದ ಅಂಶಗಳು, ಇದರ ಆಶಯದ ತಳಹದಿಯ ಮೇಲೆ ರೂಪಿಸಲಾದ ಹಲವಾರು ಕ್ರಾಂತಿಕಾರಿ ಬದಲಾವಣೆಗಳನ್ನು ಒಳಗೊಂಡ 'ಕರ್ನಾಟಕ ಗ್ರಾಮಸ್ವರಾಜ್ ಹಾಗೂ ಪಂಚಾಯತ್ ರಾಜ್ ಕಾಯಿದೆ'ಯ ಪ್ರಮುಖ ಅಂಶಗಳು, ಅದರ ಪರಿಣಾಮಕಾರಿ ಅನುಷ್ಠಾನದ ಪ್ರಕ್ರಿಯೆಗೆ ಇರುವ ಸವಾಲುಗಳು, ತ್ರಿಸ್ತರ ಪಂಚಾಯತ್‌ಗಳ ಪಾತ್ರ ಇವೆಲ್ಲವುಗಳ ಕುರಿತಾಗಿ ಗಂಭೀರ ಚರ್ಚೆ ನಡೆಸುವುದು ಅತ್ಯಂತ ಸಮಯೋಚಿತವಾದುದು ಹಾಗೂ ಅರ್ಥಪೂರ್ಣವಾದುದು. ಈ ನೆಲೆಯಲ್ಲಿ, ಮೊದಲನೇಯ ದಿನದ ಈ ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲೆಯಲ್ಲದೇ ರಾಜ್ಯದ ವಿವಿಧ ಜಿಲ್ಲೆಗಳಿಂದ ಒಟ್ಟಾರೆ 150-200 ಜನ ಆಸಕ್ತ ಹಾಗೂ ಪರಿಣಿತರ ಜೊತೆ ಆಳವಾದ ಚರ್ಚೆ ನಡೆಸಲಾಗುತ್ತದೆ. ಎರಡನೇ ದಿನದ ಕಾರ್ಯಕ್ರಮದಲ್ಲಿ ಈ ಸಂವಾದದ ಪ್ರಮುಖಾಂಶಗಳನ್ನು ಮಂಡಿಸಿ, ತ್ರಿಸ್ತರ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಗಟ್ಟಿಗೊಳಿಸಿ, ಪ್ರಜಾತಂತ್ರ ವ್ಯವಸ್ಥೆಯನ್ನು ಎತ್ತಿಹಿಡಿಯುವಲ್ಲಿ ಭಾಗವಹಿಸಿದವರ, ಎಲ್ಲಾ ಹಂತದ ಸರ್ಕಾರದ ಪ್ರತಿಕ್ರಿಯೆ ಕೇಳಲಾಗುತ್ತದೆ. ಆ ದಿನದ ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲೆಯೊಂದಿಗೆ ರಾಜ್ಯದಾದ್ಯಂತ ವಿವಿಧ ಜಿಲ್ಲೆಗಳಿಂದ ಒಟ್ಟಾಗಿ ಸುಮಾರು 500-600 ಜನ ಪಂಚಾಯತ್ ಚುನಾಯಿತ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಅಲ್ಲದೇ ಮಕ್ಕಳು, ಮಹಿಳೆಯರು ಮುಂತಾದ ಬೇರೆ ಬೇರೆ ವಿಷಯಗಳಿಗೆ ಸ್ಥಳೀಯ ಸರ್ಕಾರಗಳ ಪಾತ್ರ ಅರಿತು, ಅವರೊಂದಿಗೆ ಸೇರಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳಾದ ಬ್ರೆಡ್ಸ್ ಸಂಸ್ಥೆ, ಇಕ್ವೇಷನ್ಸ್, ಆಕ್ಷನ್-ಏಡ್, ಜಾಗೃತಿ ಮಹಿಳಾ ಒಕ್ಕೂಟ, ಸುಗ್ರಾಮ ಮುಂತಾದ ಸಂಸ್ಥೆಗಳೂ ಸಹ ಭಾಗವಹಿಸಲಿವೆ. **ಈ ಕಾರ್ಯಕ್ರಮದ ರೂಪು-ರೇಷೆ ಹಾಗೂ ಸಂಪನ್ಮೂಲ ವ್ಯಕ್ತಿಗಳ ವಿವರಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.**

73ನೇ ಸಂವಿಧಾನ ತಿದ್ದುಪಡಿಯ ಪ್ರಕ್ರಿಯೆಯ ಭಾಗಿದಾರರಾಗಿದ್ದ ಶ್ರೀ ಮೀನಾಕ್ಷಿಸುಂದರಂ, ಗ್ರಾಮ ಸ್ವರಾಜ್ ಕಾಯಿದೆಯು ರೂಪುಗೊಳ್ಳುವಿಕೆಗೆ ಮೂಲವಾದ ಶ್ರೀ ರಮೇಶಕುಮಾರ್ ನೇತೃತ್ವದ ಕಾಯಿದೆ ತಿದ್ದುಪಡಿ ಸಮಿತಿಯ ಸದಸ್ಯರಾದ ಶ್ರೀಮತಿ ನಂದನ ರೆಡ್ಡಿ, ಶ್ರೀ ವಿ.ವೈ.ಘೋರ್ಪಡೆ, ಈ ಹಿಂದೆ ಕೇರಳ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದ ಶ್ರೀ ಎಸ್.ಎಂ.ವಿಜಯಾನಂದ, ಭೂತಾನ್ ಸರ್ಕಾರಕ್ಕೆ ಸಲಹೆಗಾರರಾಗಿರುವ ಶ್ರೀ ಪಿ.ಪಿ.ಬಾಲನ್, ಶ್ರೀ ಹೆಚ್.ಎಸ್.ಅಶೋಕಾನಂದ, ಮ್ಯಾನೇಜಿಂಗ್ ಡೈರೆಕ್ಟರ್, ಎನ್.ಇ.ಕೆ.ಆರ್.ಟಿ.ಸಿ, ರಾಜೀವಗಾಂಧಿ ಗ್ರಾಮೀಣ ಯುವ ಜನರ ಅಭಿವೃದ್ಧಿ ಸಂಸ್ಥೆಯ ಸ್ಥಳೀಯಾಡಳಿತ ವಿಭಾಗದ ಮುಖ್ಯಸ್ಥರಾದ ಶ್ರೀ ಕೆ. ಗಿರೀಸನ್, ಇನ್ಸ್ಟಿಟ್ಯೂಟ್ ಆಫ್ ಸೋಷಿಯಲ್ & ಎಕೋನೊಮಿಕ್ ಚೇಂಜ್‌ನ ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ವಿಷಯದ ಪ್ರೊಫೆಸರ್ ಡಾ. ಜೋಸ್ ಚಾತುಕುಲಮ್ ಮುಂತಾದವರು ಸಂಪನ್ಮೂಲ ವ್ಯಕ್ತಿಗಳಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ.

# ಕುಂದಾಪುರ ತಾಲೂಕು ಪಂಚಾಯತ್ ರಾಜ್ ಒಕ್ಕೂಟ

C/o ನಮ್ಮ ಭೂಮಿ, ಹಟ್ಟಿಯಂಗಡಿ ಕ್ರಾಸ್ ಬಳಿ, ಕನ್ಯಾನ ಅಂಚೆ,
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

Email: panchayatrajkundapura@gmail.com


**ಈ ಎರಡು ದಿನದ ಕಾರ್ಯಕ್ರಮ ನಡೆಯುತ್ತಿರುವ ಬಗ್ಗೆ, ಅದರ ಮಹತ್ವದ ಬಗ್ಗೆ ತಮ್ಮ ಪತ್ರಿಕೆಗಳಲ್ಲಿ ಮುಂಚಿತವಾಗಿ ಪ್ರಕಟಿಸಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ಅಲ್ಲದೇ ಎರಡೂ ದಿನದ ಕಾರ್ಯಕ್ರಮದಲ್ಲಿ ತಾವು ಸಕ್ರೀಯವಾಗಿ ಭಾಗವಹಿಸಿ ಕಾರ್ಯಕ್ರಮ ಹಾಗೂ ಕಾರ್ಯಕ್ರಮದ ಪ್ರಮುಖ ನಿರ್ಣಯಗಳ ಬಗ್ಗೆ ತಮ್ಮ ಪತ್ರಿಕೆಯಲ್ಲಿ ಸವಿವರವಾಗಿ ವರದಿ ಮಾಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇವೆ.**

ವಿಕೇಂದ್ರೀಕೃತ ಪ್ರಜಾತಂತ್ರ ವ್ಯವಸ್ಥೆ, ಸ್ಥಳೀಯ ಸರ್ಕಾರದ ಸಬಲೀಕರಣದೊಂದಿಗೆ ಗ್ರಾಮ ಸ್ವರಾಜ್ ಸ್ಥಾಪನೆಯತ್ತ ಹೆಜ್ಜೆ ಇಡುವಲ್ಲಿ ಮಾಧ್ಯಮದ ಪ್ರತಿನಿಧಿಯಾಗಿ ತಮ್ಮ ಸಂಪೂರ್ಣ ಸಹಕಾರ ಎದುರು ನೋಡುತ್ತಿದ್ದೇವೆ.

**ಕಾರ್ಯಕ್ರಮದ ದಿನಾಂಕ, ಸ್ಥಳ & ಸಮಯ**

| ದಿನಾಂಕ | ಸ್ಥಳ | ಸಮಯ |
|---|---|---|
| ಫೆಬ್ರವರಿ 23, 2018, ಶುಕ್ರವಾರ | **ಡಾ॥ ವಿ.ಎಸ್. ಆಚಾರ್ಯ ಸಭಾಂಗಣ,** ಜಿಲ್ಲಾ ಪಂಚಾಯತ್, ರಜತಾದ್ರಿ, ಮಣಿಪಾಲ, ಉಡುಪಿ | ಬೆಳಿಗ್ಗೆ 9.30 ರಿಂದ ಸಂಜೆ 5.00ರವರೆಗೆ |
| ಫೆಬ್ರವರಿ 24, 2018, ಶನಿವಾರ | **ವಾಜಪೇಯಿ ಸಭಾಂಗಣ** ಜಿಲ್ಲಾಧಿಕಾರಿಗಳ ಕಛೇರಿ ಸಂಕೀರ್ಣ, ರಜತಾದ್ರಿ, ಮಣಿಪಾಲ, ಉಡುಪಿ | ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 2.00ರವರೆಗೆ |

ಇತಿ ತಮ್ಮ ವಿಶ್ವಾಸಿ,

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**
ಉದಯಕುಮಾರ್ ಶೆಟ್ಟಿ: 9448951767
ಎಸ್. ಜನಾರ್ಧನ: 9448501879
ಶ್ರೀನಿವಾಸ ಗಾಣಿಗ: 9482255113

ಉದಯಕುಮಾರ್ ಶೆಟ್ಟಿ
ಅಧ್ಯಕ್ಷರು, ಕುಂದಾಪುರ ತಾಲೂಕು ಪಂಚಾಯತ್ ರಾಜ್ ಒಕ್ಕೂಟ